

## ಬ್ರಿಟಿಷರ ಕಾಲದ ಮೈಲಿಗಲ್ಲು

ನಮ್ಮನ್ನು ನೂರಾರು ವರ್ಷಗಳ ಕಾಲ ಆಳಿದ ಬ್ರಿಟಿಷರು, ನಮ್ಮ ದೇಶಕ್ಕೆ ಸಾಕಷ್ಟು ಸುಧಾರಣೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಅವರ ಆಡಳಿತದ ಕಾಲಾವಧಿಯಲ್ಲಿ ಮಾಡಿದ ಕಾಮಗಾರಿಗಳು ಬಹಳಷ್ಟು ದೀರ್ಘಕಾಲದ ಬಾಳಿಕೆ ಹಾಗೂ ಮಜಬೂತಾಗಿಯೂ ಇವೆ. ಈ ಕಾರಣಕ್ಕೆ ಅವರನ್ನು ಅಭಿನಂದಿಸಲೇಬೇಕು. ಅವು ಈಗಿನಂತೆ ಕಳಪೆ ಕಾಮಗಾರಿಗಳಾಗಿರಲಿಲ್ಲ. ಬ್ರಿಟಿಷ್ ಕಾಲದ ನಿರ್ಮಾಣದ ನಿದರ್ಶನಗಳು ಇಂದಿಗೂ ನಮಗೆ ಬಹಳಷ್ಟು ಕಾಣಸಿಗುತ್ತವೆ.




ಶಿವಮೊಗ್ಗದಿಂದ ಉಡುಪಿ ಅಥವಾ ಮಂಗಳೂರಿಗೆ ಹೋಗಬೇಕಾದರೆ ತೀರ್ಥಹಳ್ಳಿಯ ನಂತರ ಆಗುಂಬೆ ಘಾಟ್ ಸಹ್ಯಾದ್ರಿಯ ಪರ್ವತ ಶ್ರೇಣಿಗಳ ಮೂಲಕ ಹಾದು ಹೋಗಬೇಕು. ಹೀಗೆ ಆಗುಂಬೆ ಘಾಟ್ ಮೂಲಕ ಸಾಗುವಾಗ 'ಬ್ರಿಟಿಷರ ಕಾಲದ ಮೈಲಿಗಲ್ಲು' ಈಗಲೂ ನಮಗೆ ಕಾಣಸಿಗುತ್ತದೆ. ಶಿವಮೊಗ್ಗದಿಂದ ದೂರ ಹಾಗೂ ಸಮುದ್ರ ಮಟ್ಟದಿಂದ ಎಷ್ಟು ಎತ್ತರದಲ್ಲಿದೆ ಎನ್ನುವ ಮಾಹಿತಿಯನ್ನು ಒಂದು ಮೈಲಿಗಲ್ಲು ಹೊಂದಿದ್ದರೆ, ಮತ್ತೊಂದರಲ್ಲಿ 'ಮುಂದೆ ಘಾಟ್ ಇದೆ' ಎಂಬ ಮಾಹಿತಿ ಒಳಗೊಂಡಿದೆ. ಈ ಮೈಲುಗಲ್ಲುಗಳನ್ನು 1839ರಲ್ಲಿ ಸ್ಥಾಪಿಸಲಾಗಿದೆ ಎನ್ನುವ ಮಾಹಿತಿ ಮೈಲಿಗಲ್ಲುಗಳಲ್ಲಿ ಕೆತ್ತಲಾಗಿದೆ. ಈಗಿನಂತೆ ಬಣ್ಣದಿಂದ ಮೈಲಿಗಲ್ಲುಗಳ ಮೇಲೆ ಮಾಹಿತಿ ಬರೆದಿದ್ದರೆ ಅದು ಕೆಲವೇ ದಿನಗಳಲ್ಲಿ ಅಳಿಸಿ ಹೋಗುತ್ತಿತ್ತು. ಇಲ್ಲವೇ ಕಿಡಿಗೇಡಿಗಳು ವಿರೂಪಗೊಳಿಸುತ್ತಿದ್ದರು. ಆ ಕಾಲದ ಮೈಲಿಗಲ್ಲು ಈಗಲೂ ಗಟ್ಟಿಮುಟ್ಟಾಗಿದೆ. ಈ ಮಾರ್ಗದ ಮೂಲಕ ಸಂಚರಿಸುವವರು ಈ ಮೈಲಿಗಲ್ಲುಗಳನ್ನು ವೀಕ್ಷಿಸಿ, ಮುಂದೆ ಅನತಿ ದೂರದಲ್ಲಿ ಆಗುಂಬೆಯ ಸೌಂದರ್ಯವನ್ನೂ ಸವಿಯುವ 'ವ್ಯೂಹ್ ಪಾಯಿಂಟ್'ಗೂ ತಲುಪಬಹುದು.

–ಜೆ.ಸಿ.ಜಾಧವ, ಬಾಗಲಕೋಟೆ

## ಮಾತಾಡದ ಜಗಳಗಂಟಿ

ಶಿವಮೊಗ್ಗದ ತಾವರೆಕೊಪ್ಪದಲ್ಲಿರುವ ಸಿಂಹಧಾಮಕ್ಕೆ ಭೇಟಿ ನೀಡಿದಾಗ, ಅಲ್ಲಿನ ಮೃಗಾಲಯದ ಆವರಣದಲ್ಲಿ ಬೆಳೆಸಲಾಗಿರುವ ವೃಕ್ಷ ರಾಶಿಯ ಮಧ್ಯದಲ್ಲಿ 'ಜಗಳಗಂಟಿಮರ'ದ ದರ್ಶನವಾಯಿತು. ಮನುಷ್ಯರಲ್ಲಿ ಜಗಳಗಂಟಿಯರು ಇರುವುದು ಸಹಜ. ಆದರೆ ಈ ಮಾತಾಡದ ಮರಕ್ಕೆ ಜಗಳಗಂಟಿ ಹೆಸರು ಹೇಗೆ ಬಂತೆಂಬ ಕುತೂಹಲ ಕಾಡಿತು. ಅದನ್ನು ಹುಡುಕಿ ಹೊರಟಾಗ, 'ಈ ಮರವನ್ನು ಮನೆಯ ಹತ್ತಿರ ಬೆಳೆಸಿದರೆ, ಅತ್ತೆ ಸೊಸೆಯರಲ್ಲಿ ಜಗಳ ಆರಂಭವಾಗುತ್ತದೆ ಎಂಬ ಪುರಾತನ ಭಾರತೀಯರ ನಂಬಿಕೆ' ಎಂದು ತಿಳಿಯಿತು. 'ಡಿಯೋಸ್ಪೈರಸ್ ಮೊಂಟಾನಾ' ಎಂಬ ವೈಜ್ಞಾನಿಕ ಹೆಸರಿನ ಈ ಮರ, ಹಲವಾರು ಔಷಧೀಯ ಗುಣಗಳನ್ನೂ ಹೊಂದಿದೆ ಹಾಗೂ ಜಪಾನ್ ನಂತಹ ದೇಶಗಳಲ್ಲಿ ಇದನ್ನು ಬೋನ್ಸಾಯ್ ಆಗಿಯೂ ಮನೆಯಲ್ಲಿ ಇಟ್ಟುಕೊಳ್ಳುತ್ತಾರೆ. ಆದರೆ ನಮ್ಮ ದೇಶದಲ್ಲಿ ಏಕೋ ಏನೋ ಜಗಳಗಂಟಿ ಎಂದು ಅಪಖ್ಯಾತಿಗೆ ಪಾತ್ರವಾಗಿದೆ. ಆದರೆ ಇದರ ಸಸಿಯನ್ನು ತೋಟಗಾರಿಯಲ್ಲಿ ಸಪೋಟ ಕಸಿಯಲ್ಲಿ ಬಳಸುತ್ತಾರೆ.

–ಎಚ್.ಎಸ್. ನವೀನಕುಮಾರ್, ಹೊಸದುರ್ಗ




### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly